O.S.No. 484/2015 P W - 1

ದಿನಾಂಕ 03.04.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ 3 ನೇ ಪ್ರತಿವಾದಿ ಪರ ಶ್ರೀ.C.G.P. ವಕೀಲರಿಂದ ಃ

ನನ್ನ ತಾತನ ಹೆಸರು ಚಿಕ್ಕೇಗೌಡ ಉರುಫ್ ಚಲುವೇಗೌಡ. ನನ್ನ ತಾತನಿಗೆ 7 ಜನ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ಜನ ಮಕ್ಕಳು ಎಂದು ನುಡಿಯುತ್ತಾರೆ. ಚಲುವೇಗೌಡ, ನರಸೇಗೌಡ, ಕೆಂಚೇಗೌಡ, ಕರೀಗೌಡ, ಚಿಕ್ಕತಾಯಪ್ಪ ಮತ್ತು ಚಲುವ. ನನ್ನ ತಾತ ಚಲುವೇಗೌಡರಿಗೆ ಸಿಂಗಮ್ಮ ಎನ್ನುವ ಮಗಳು ಇದ್ದರು ಎಂದರೆ ಸರಿ.

ನಾನು ಪ್ರತಿವಾದಿಗಳ ವಿರುದ್ಧ ವಿಭಾಗಕ್ಕಾಗಿ ದಾವೆಯನ್ನು ಹೂಡಿರುತ್ತೇನೆ. ಚಿಕ್ಕತಾಯಪ್ಪ, ಚಿಕ್ಕ ಚಲುವಯ್ಯ ಇವರನ್ನು ಹೊರತುಪಡಿಸಿ ಬೇರೆ ಯಾರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಚಲುವೇಗೌಡನ 6 ಜನ ಮಕ್ಕಳು ಈಗಾಗಲೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಗಳು ಮೂಲತಃ ಚಲುವೇಗೌಡರವರಿಗೆ ಸೇರಿತ್ತು ಎಂದರೆ ಸರಿ. ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ನನ್ನ ತಾತನಿಗೆ ಸೇರಿದ ಆಸ್ತಿಗಳು ಇನ್ನೂ ಇದ್ದಾವೆ ಎಂದರೆ ಸರಿ.

3 ನೇ ಪ್ರತಿವಾದಿಯ ತಂದೆ ಬಸವೇಗೌಡರು, 3 ನೇ ಪ್ರತಿವಾದಿ ಖರೀದಿ ಮಾಡಿದ ಸ್ವತ್ತುಗಳನ್ನು ಮಾತ್ರ ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇವೆ ಎಂದರೆ ಸರಿ. ದಿನಾಂಕ 07.07.1972 ರಂದು ನಮ್ಮ ತಂದೆ ಕರೀಗೌಡ 3 ನೇ ಪ್ರತಿವಾದಿ ತಂದೆಗೆ ಸರ್ವೆ ನಂಬರ್ 69/23 ರಲ್ಲಿ 25 ಗುಂಟೆ ವಿಸ್ತೀರ್ಣ ವನ್ನು ಮಾರಾಟ ಮಾಡಿರುತ್ತಾರೆ ಎಧದರೆ ಸರಿಯಲ್ಲ.

ದಿನಾಂಕ 11.10.2001 ರಂದು 1 ನೇ ಪ್ರತಿವಾದಿ ತಂದೆ ಮತ್ತು ಅವರ ಸಹೋದರರು ಅವರ ಭಾಗದ ಆಸ್ತಿಯಾದ ಸರ್ವೆ ನಂ. 62/9 ರಲ್ಲಿ 15 ವರೆ

ಗುಂಟೆ, ಸರ್ವೆ ನಂ. 69/36 ರಲ್ಲಿ 9 ವರೆ ಗುಂಟೆ ಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮತ್ತು ಅವರ ತಂದೆಗೆ ಆದಂತಹ ಕ್ರಯ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ.

ಕ್ರಯ ಪತ್ರದ ಆಧಾರದ ಮೇರೆಗೆ 3 ನೇ ಪ್ರತಿವಾದಿ ಮತ್ತು ಅವರ ತಂದೆಯ ಹೆಸರಿಗೆ ಖಾತೆ ಯಾಗಿರುತ್ತದೆ ಎಂದರೆ ಬೋಗಸ್ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಮತ್ತು ಅವರ ತಂದೆ ಸ್ವತ್ತನ್ನು ಕ್ರಯ ಪತ್ರದ ನಂತರ ಅಭಿವೃದ್ಧಿ ಪಡಿಸಿಕೊಂಡು ಅವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ತಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯ ತಂದೆಗೆ ಇನ್ನೊಬ್ಬ ಮಗ ಇರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ಹೆಂಡತಿಯ ಮಗ ಇದ್ದಾನೆ ಎದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಬೆಲೆಯು ಹೆಚ್ಚಾಗಿರುವ ಕಾರಣ ದಾವಾ ಸ್ವತ್ತುಗಳನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಾಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ